## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 369 (431) |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀದರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೆ ನಂ. 5 ರಲ್ಲಿ 52 ಎಕರೆ 25 ಗುಂಟೆ ಜಮೀನನ್ನು ತಾತ್ಕಾಲಿಕವಾಗಿ ಅರಣ್ಯ ಇಲಾಖೆಯ ಉಸ್ತುವರಿಗಾಗಿ ಹಾಗೂ ಸಂರಕ್ಷಣೆಗಾಗಿ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಆದೇಶ ಸಂ.ಡಿಎಸ್(ಡಿ)ಸಿಆರ್ 10/94-95 ದಿನಾಂಕ:09.08.1995 ರಂತೆ ಹೆನ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ, 52 ಎಕರೆ 25 ಗುಂಟೆ ಜಮೀನನ್ನು ಅರಣ್ಯ ಇಲಾಖೆಗೆ ಸಂರಕ್ಷಣೆಗಾಗಿ ವರ್ಗಾಯಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ಸದರಿ ವರ್ಗಾವಣೆಯ ವಿವರವು ಪ್ರಸ್ತುತ ಪಹಣಿಯ ಇತರೆ ಹಕ್ಕುಗಳ ಕಾಲಂನಲ್ಲಿಯೂ ದಾಖಲಾಗಿರುತ್ತದೆ |
| ಆ) | ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು ಆದೇಶವಾಗಿದ್ದರೂ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸದೇ ಇರುವುದಕ್ಕೆ ಕಾರಣವೇನು; (ವಿವರ ನೀಡುವುದು) | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಆದೇಶ ಸಂ.ಡಿಎಸ್(ಡಿ)ಸಿಆರ್ 10/94-95 ದಿನಾಂಕ:09.08.1995ರಂತೆ ಹೆನ್ನಾಗರ ಗ್ರಾಮದ ಸರ್ವೆ ನಂ 5 ರಲ್ಲಿ 52 ಎಕರೆ 25 ಗುಂಟೆ ಜಮೀನನ್ನು ಅರಣ್ಯ ಇಲಾಖೆಗೆ ಸಂರಕ್ಷಣೆಗಾಗಿ ವರ್ಗಾಯಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ಆದರೆ, ಈ ಕೆಳಕಂಡ ಕಾರಣಗಳಿಂದಾಗಿ ಅರಣ್ಯ ಇಲಾಖೆಗೆ ಜಮೀನನ್ನು ಹಸ್ತಾಂತರಿಸುವ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ.<br>1. ಅರಣ್ಯ ಇಲಾಖೆಗೆ ಮಂಜೂರಾಗಿರುವ ಮಂಜೂರಿ ವಿಸ್ತೀರ್ಣವನ್ನು ಗುರುತಿಸಿರುವ ಮಂಜೂರಿ ನಕ್ಷೆ ಇರುವುದಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 78-05 ಎಕರೆ/ಗುಂಟೆ ವಿಸ್ತೀರ್ಣ ಇರುವುದರಿಂದ ಈ ಒಟ್ಟು |

ವಿಸ್ತೀರ್ಣದ ಪೈಕಿ ಅರಣ್ಯ ಇಲಾಖೆಗೆ ಸೇರಿದ 52-25 ಎಕರೆ/ಗುಂಟೆ ಪ್ರದೇಶವನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ.

2. ಸ.ನಂ.5ರಲ್ಲಿ ಒಟ್ಟು 78-05 ಎಕರೆ/ಗುಂಟೆ ಇದ್ದು, ಈ ಪೈಕಿ ಈ ಕೆಳಕಂಡಂತೆ ಮಂಜೂರಿ/ಅನುಭವ/ಒತ್ತುವರಿ ಇರುತ್ತದೆ.

| | | |
|---|---|---|
| ಸರ್ಕಾರಿ ಪ್ರೌಢಶಾಲೆ ಆಟದ ಮೈದಾನಕ್ಕೆ | ಮಂಜೂರಿ | 8-00 ಎಕರೆ |
| ಸಾರ್ವಜನಿಕ ಸ್ಮಶಾನಕ್ಕೆ | ಮಂಜೂರಿ | 7-00 ಎಕರೆ |
| ಆಶ್ರಯ ಯೋಜನೆಯಡಿ | ಮಂಜೂರಿ | 8-00 ಎಕರೆ |
| ಯಲ್ಲಮ್ಮ ದೇವಸ್ಥಾನ | ಒತ್ತುವರಿ | 2-20 ಎ-ಗುಂ |
| ಕಾವೇರಿ ನೀರು ಸಂಗ್ರಹಣಾ ಟ್ಯಾಂಕ್ | ಒತ್ತುವರಿ | 0-07 ಗುಂಟೆ |
| ಹೊಸಹಳ್ಳಿ ಇಂದ ಹೆನ್ನಾಗರ, ಹೆನ್ನಾಗರ ಇಂದ ಬೊಮ್ಮಸಂದ್ರದ ಮಾರ್ಗ | ರೂಢೀ ದಾರಿ | 5-00 ಎಕರೆ |
| **ಒಟ್ಟು** | | **30-27 ಎ-ಗುಂ** |

3 ನಮೂನೆ 50 ಮತ್ತು 53ರಡಿ ಅರ್ಜಿ ಸಲ್ಲಿಸಿರುವ 21 ಜನರು ಒಟ್ಟು 24 ಎಕರೆ 10 ಗುಂಟೆ ಜಮೀನಿನ ಅನುಭವದಲ್ಲಿರುವುದಾಗಿ ವರದಿಯಾಗಿರುತ್ತದೆ. ಸದರಿ ಪ್ರಕರಣಗಳು ಸಾಗುವಳಿ ಚೀಟಿ ನೀಡದೇ ಬಾಕಿಯಿರುವ

| | | |
|---|---|---|
| | | ಪ್ರಕರಣಗಳ ಪೈಕಿ ಸೇರಿರುತ್ತದೆ.<br>4. ಸದರಿ 21 ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅನುಸೂಚಿತ ಜಾತಿಗಳ ಆಯೋಗದಲ್ಲಿ ಪ್ರಕರಣ ಸಂ.08/ESDW/30/2024-RU ದಾಖಲಾಗಿದ್ದು, ಅನುಭವದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಲಾಗಿರುತ್ತದೆ.<br>5. ಸ.ನಂ.5ರಲ್ಲಿ ಅಂದಾಜು 70ರಿಂದ 80 ಅನಧಿಕೃತ ಮನೆಗಳಿದ್ದು, ಕೆಲವು ನಿವಾಸಿಗಳು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-CC ಅಡಿ ಸಕ್ರಮ ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>6. ಮೇಲಿನ ಕೋಷ್ಟಕಗಳಲ್ಲಿ ನಮೂದಿಸಿರುವಂತೆ, ಮಂಜೂರಿ ಮತ್ತು ಒತ್ತುವರಿ ವಿಸ್ತೀರ್ಣವು ಅರಣ್ಯ ಇಲಾಖೆಗೆ ಮಂಜೂರಾಗಿರುವ ಜಮೀನಿಗೂ ಒಳಗೊಂಡಂತೆ ಇರುತ್ತದೆ.<br>7. ಸರ್ವೆ ನಂಬರ್ 5 ರಲ್ಲಿನ ಒತ್ತುವರಿ ತೆರವುಗೊಳಿಸುವ ವಿಚಾರದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಸಂ.ಡಬ್ಲ್ಯೂಪಿ ನಂ.11046/2021 (ಪಿಐಎಲ್-ಕೆಎಲ್ಆರ್) ರಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿ ಇರುತ್ತದೆ.<br>8. ಪ್ರಸ್ತುತ ಉಪ ತಹಶೀಲ್ದಾರ್, ರಾಜಸ್ವ ನಿರೀಕ್ಷಕರು, ಗ್ರಾಮ ಆಡಳಿತ ಅಧಿಕಾರಿ ಮತ್ತು ತಾಲ್ಲೂಕು ಭೂಮಾಪಕರಿಗೆ ಜಂಟಿ ETS ಸರ್ವೆ ನಡೆಸಿ, ವಿವಿಧ ಮಂಜೂರಾತಿ, ಸಾರ್ವಜನಿಕ |

| | | |
|---|---|---|
| | | ಬಳಿಕ, ಅನುಭವ ಮತ್ತು ಒತ್ತುವರಿ ಪ್ರದೇಶಗಳನ್ನು ಪ್ರತ್ಯೇಕವಾಗಿ ಗುರುತಿಸಿದ ನಕ್ಷೆ ಹಾಗೂ ವರದಿಯನ್ನು ತುರ್ತಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ. |
| ಇ) | ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೆ ನಂ. 5 ರಲ್ಲಿ ಅನಧಿಕೃತವಾಗಿ ವಸತಿಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅನಧಿಕೃತ ವಸ್ತುಗಳನ್ನು ಅಕ್ರಮವಾಗಿ ನಿರ್ಮಿಸುತ್ತಿರುವ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಹೆನ್ನಾಗರ ಗ್ರಾಮದ ಸ.ನಂ.5ರಲ್ಲಿ ಅಂದಾಜು 70ರಿಂದ 80 ಅನಧಿಕೃತ ಮನೆಗಳು ನಿರ್ಮಾಣವಾಗಿರುತ್ತದೆ. ಈ ಮನೆಗಳ ಕೆಲವು ನಿವಾಸಿಗಳು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-CC ಅಡಿ ಸಕ್ರಮ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದು, ಸದರಿ ಅರ್ಜಿಗಳು ನಿರ್ಣಯಕ್ಕೆ ಬಾಕಿಯಿರುತ್ತವೆ.<br><br>ನಮೂನೆ 50 ಮತ್ತು 53ರಡಿ ಸಲ್ಲಿಸಿರುವ 21 ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅನುಸೂಚಿತ ಜಾತಿಗಳ ಆಯೋಗವು ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿರುತ್ತದೆ. ಆದ್ದರಿಂದ ಜಂಟಿ ಸರ್ವೆ ಮೂಲಕ ಪ್ರತಿಯೊಂದು ಅನಧಿಕೃತ ಅನುಭವ ಮತ್ತು ಕಟ್ಟಡವನ್ನು ಗುರುತಿಸಿ, ಕಲಂ 94-CC ಅರ್ಜಿಗಳ ಅರ್ಹತೆಯನ್ನು ನಿಯಮಾನುಸಾರ ಪರಿಶೀಲಿಸಿ, ನ್ಯಾಯಾಲಯ ಮತ್ತು ರಾಷ್ಟ್ರೀಯ ಆಯೋಗದ ಅನ್ವಯಿಸುವ ಆದೇಶಗಳಿಗೆ ಒಳಪಟ್ಟು ಅನರ್ಹ ಒತ್ತುವರಿಗಳ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 104 ಹಾಗೂ ಇತರ ಅನ್ವಯಿಸುವ ಕಾನೂನುಗಳನ್ವಯ ಕ್ರಮ ಕೈಗೊಳ್ಳಲಾಗುವುದು |
| ಈ) | ಈ ಜಮೀನು ಸರ್ವೇ ನಂ. 5 ರಲ್ಲಿ ಆಕಾರ್ ಬಂದಂತೆ ಒಟ್ಟು ವಿಸ್ತೀರ್ಣ 78-05 ಎ/ಗುಂಟೆ ಇದ್ದು, ಸದರಿ ವಿಸ್ತೀರ್ಣ ಜಮೀನಿನಲ್ಲಿ 8 ಎಕರೆ ಸರ್ಕಾರಿ | ಹೆನ್ನಾಗರ ಗ್ರಾಮದ ಸ.ನಂ.5ರಲ್ಲಿ ಸರ್ಕಾರಿ ಪ್ರೌಢಶಾಲೆಯ ಆಟದ ಮೈದಾನಕ್ಕಾಗಿ 8 ಎಕರೆ ಜಮೀನು ಮಂಜೂರಾಗಿರುವುದು ಪ್ರಸ್ತುತ ಪಹಣಿಯ ಇತರೆ ಹಕ್ಕುಗಳ ಕಾಲಂನಲ್ಲಿ ದಾಖಲಾಗಿರುತ್ತದೆ |

| | | |
|---|---|---|
| | ಪ್ರೌಢಶಾಲಾ ಆಟದ ಮೈದಾನಕ್ಕೆ ಮಂಜೂರಾಗಿದ್ದು ಇದರಲ್ಲಿ ನಾಲ್ಕು ಎಕರೆ ಸರ್ಕಾರಿ ಶಾಲೆ ನಿರ್ಮಿಸಿದ್ದು ಇನ್ನು 4 ಎಕರೆ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ 8 ಎಕರೆ ಜಮೀನಿನ ಒಂದು ಭಾಗದಲ್ಲಿ ಸರ್ಕಾರಿ ಶಾಲೆ ಮತ್ತು ಆಟದ ಮೈದಾನವಿದ್ದು, ಮತ್ತೊಂದು ಭಾಗದಲ್ಲಿ ಶ್ರೀ ಯಲ್ಲಮ್ಮ ದೇವಸ್ಥಾನ ಸೇರಿದಂತೆ ಇತರೆ ನಿರ್ಮಾಣಗಳು ಇರುತ್ತದೆ. ಆದರೆ, ಶಾಲೆಯ ವಾಸ್ತವಿಕ ಬಳಕೆಯಲ್ಲಿರುವ ವಿಸ್ತೀರ್ಣ ಹಾಗೂ ಒತ್ತುವರಿಯಾಗಿರುವ ವಿಸ್ತೀರ್ಣವನ್ನು ಪ್ರತ್ಯೇಕವಾಗಿ ಗುರುತಿಸಿರುವ ಅಂತಿಮ ಪ್ರಮಾಣೀಕೃತ ಸರ್ವೆ ನಕ್ಷೆ ಲಭ್ಯವಿಲ್ಲದ ಕಾರಣ, ನಿಖರವಾಗಿ 4 ಎಕರೆ ಜಮೀನು ಒತ್ತುವರಿಯಾಗಿದೆ ಎಂಬುದನ್ನು ಸರ್ವೆ ಮೂಲಕ ದೃಢೀಕರಿಸಬೇಕಾಗಿರುತ್ತದೆ.<br><br>ಶಾಲೆಗೆ ಮಂಜೂರಾದ 8 ಎಕರೆ ಜಮೀನಿನ ಗಡಿ, ಶಾಲೆಯ ಬಳಕೆಯಲ್ಲಿರುವ ವಿಸ್ತೀರ್ಣ, ಶ್ರೀ.ಯಲ್ಲಮ್ಮ ದೇವಸ್ಥಾನ ಮತ್ತು ಇತರೆ ಒತ್ತುವರಿ ಪ್ರದೇಶಗಳನ್ನು ಪ್ರತ್ಯೇಕವಾಗಿ ಅಳತೆ ಮಾಡಿ ನಕ್ಷೆಯಲ್ಲಿ ಗುರುತಿಸುವಂತೆ ತಾಲ್ಲೂಕು ಭೂಮಾಪಕರು ಹಾಗೂ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಸರ್ವೆ ಕಾರ್ಯ ಪೂರ್ಣಗೊಂಡ ನಂತರ ಅನಧಿಕೃತ ಒತ್ತುವರಿ ದೃಢಪಟ್ಟಲ್ಲಿ, ಸಂಬಂಧಪಟ್ಟ ನ್ಯಾಯಾಲಯ ಮತ್ತು ಆಯೋಗದ ಆದೇಶಗಳಿಗೆ ಒಳಪಟ್ಟು ನಿಯಮಾನುಸಾರ ತೆರವು ಕ್ರಮ ಕೈಗೊಳ್ಳಲಾಗುವುದು. |
| ಊ) | ಹೆನ್ನಾಗರ ಗ್ರಾಮದ ಸರ್ವೆ ನಂ. 5 ರಲ್ಲಿ ಈ ಜಮೀನಿರುವುದು Botanical Garden ಮಾಡುವುದಾಗಿ ಅರಣ್ಯ ಇಲಾಖೆ ತಿಳಿಸಿದ್ದು, ಈ ಜಮೀನನ್ನು ಅರಣ್ಯ ಇಲಾಖೆಗೆ ಯಾವ ಕಾಲಮಿತಿಯೊಳಗೆ ವರ್ಗಾಯಿಸಲಾಗುವುದು? | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಆದೇಶ ಸಂ.DVS(D)CR:10/94-95, ದಿನಾಂಕ:09.08.1995ರನ್ವಯ ಹೆನ್ನಾಗರ ಗ್ರಾಮದ ಸ.ನಂ.5ರಲ್ಲಿನ 52 ಎಕರೆ 25 ಗುಂಟೆ ಜಮೀನನ್ನು ಅರಣ್ಯ ಇಲಾಖೆಯ ಉಸ್ತುವಾರಿ ಮತ್ತು ಸಂರಕ್ಷಣೆಗಾಗಿ ತಾತ್ಕಾಲಿಕವಾಗಿ ವರ್ಗಾಯಿಸಲು ಈಗಾಗಲೇ ಆದೇಶಿಸಲಾಗಿದ್ದು, ಸದರಿ ವಿವರವು ಪಹಣಿಯ ಇತರೆ ಹಕ್ಕುಗಳ ಕಾಲಂನಲ್ಲಿಯೂ ದಾಖಲಾಗಿರುತ್ತದೆ. |

| | | |
|---|---|---|
| | | ಆದರೆ, ಅರಣ್ಯ ಇಲಾಖೆಗೆ ನೀಡಲು ಆದೇಶಿಸಿರುವ 52 ಎಕರೆ 25 ಗುಂಟೆ ಜಮೀನಿಗೆ ಪ್ರತ್ಯೇಕ ಹಿಸ್ಸಾ ಸಂಖ್ಯೆ ಸೃಜಿಸಿ ಗಡಿ ನಿಗದಿಪಡಿಸಿರುವುದಿಲ್ಲ. ಇದೇ ಸರ್ವೆ ನಂಬರಿನಲ್ಲಿ ವಿವಿಧ ಸಾರ್ವಜನಿಕ ಉದ್ದೇಶಗಳ ಮಂಜೂರಾತಿಗಳು, ನಮೂನೆ 50 ಮತ್ತು 53ರ ಅನುಭವ ಪ್ರಕರಣಗಳು, ಕಲಂ 94-CC ಅರ್ಜಿಗಳು, ರೂಢಿದಾರಿ ಹಾಗೂ ಇತರೆ ಒತ್ತುವರಿಗಳಿರುವುದರಿಂದ, ಅರಣ್ಯ ಇಲಾಖೆಗೆ ವಾಸ್ತವಿಕ ಸ್ವಾಧೀನ ಹಸ್ತಾಂತರಿಸುವ ಮೊದಲು ಪೂರ್ಣ ಪ್ರಮಾಣದ ETS ಸರ್ವೆ ಮತ್ತು ಪೋಡಿ–ದುರಸ್ತಿ ಕಾರ್ಯ ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಸರ್ವೆ ಮತ್ತು ಗಡಿ ಗುರುತಿಸುವಿಕೆ ಪೂರ್ಣಗೊಂಡು, ವಿವಿಧ ಮಂಜೂರಾತಿ ಹಾಗೂ ಒತ್ತುವರಿ ಪ್ರದೇಶಗಳ ಪರಸ್ಪರ ವ್ಯಾಪ್ತಿಯನ್ನು ನಿರ್ಧರಿಸಿದ ನಂತರ, W.P.No.11046/2021 ಮತ್ತು ರಾಷ್ಟ್ರೀಯ ಅನುಸೂಚಿತ ಜಾತಿಗಳ ಆಯೋಗದ ಅನ್ವಯಿಸುವ ಆದೇಶಗಳಿಗೆ ಒಳಪಟ್ಟು, ಅರಣ್ಯ ಇಲಾಖೆಗೆ ನೀಡಲು ಆದೇಶಿಸಿರುವ ಜಮೀನಿಗೆ ಪೋಡಿ-ದುರಸ್ತಿ ಮಾಡಿ ವಾಸ್ತವಿಕ ಸ್ವಾಧೀನ ಹಸ್ತಾಂತರಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ. ಆರ್‌ಡಿ 160 ಎಲ್‌ಜಿಕ್ಯೂ 2026**

(**ಡಾ: ಜಿ. ಪರಮೇಶ್ವರ**)
ಉಪ ಮುಖ್ಯಮಂತ್ರಿಗಳು.